ದಿನಾಂಕಃ **20.06.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಸಹಿ ನನ್ನದೇ ಇರುತ್ತದೆ.

ಮುಂದುವರೆದ ಮುಖ್ಯ ವಿಚಾರಣೆ : ಅಪೀಲುದಾರರ ಪರ ವಕೀಲರಿಂದಃ

ಓ.ಎಸ್. ನಂ. 12/2012 ರ ತೀರ್ಪಿನ ದೃಢೀಕೃತ ಪ್ರತಿಯನ್ನು ನಿಪಿ**1** ಎಂದು ಗುರುತಿಸಿತು.

ಪಾಟೀ ಸವಾಲು : **1** ನೇ ಎದುರುದಾರರ ಪರ ಶ್ರೀ ಜಿ.ವಿ.ಕೆ. ವಕೀಲರಿಂದಃ

01. ಓ.ಎಸ್. ನಂ. 12/2012 ರ ವಿಚಾರಣೆ ನಡೆಯುತ್ತಿದ್ದಾಗ ನಾನು ಪ್ರತೀ ಹಿಯರಿಂಗ್ ದಿನಾಂಕಗಳಂದೂ ಕೋರ್ಟಿಗೆ ಹಾಜರಾಗುತ್ತಿದ್ದೆ ಎಂದರೆ ಸರಿ. ಸದರಿ ದಾವೆ ಪ್ರಾರಂಭವಾದಾಗಿನಿಂದ ಅದರಲ್ಲಿ ತೀರ್ಪು ನೀಡುವವರೆಗೂ ನಾನು ಕೋರ್ಟಿಗೆ ಹಾಜರಾಗುತ್ತಿದ್ದೆ ಎಂದರೆ ಸರಿ. ಸದರಿ ದಾವೆಯ ತೀರ್ಪು ಯಾವ ದಿನಾಂಕದಂದು ನೀಡಲಾಗಿತ್ತು? ಎಂದರೆ ಆ ಸಮಯಕ್ಕೆ ನನ್ನ ಮೂವರು ಮಕ್ಕಳು ಮೃತಪಟ್ಟಿದ್ದರಿಂದ ನಾನು ಆಘಾತಕ್ಕೆ ಒಳಗಾಗಿದ್ದು, ತೀರ್ಪು ನೀಡಿದ ದಿನಾಂಕದ ಬಗ್ಗೆ ನನಗೆ ಅರಿವಿಲ್ಲ. ತೀರ್ಪು ನೀಡಿದ ದಿನಾಂಕದಂದು ನಾನು ಕೋರ್ಟಿಗೆ ಹಾಜರಾಗಿದ್ದು, ಅದರ ಬಗ್ಗೆ ನನಗೆ ಮಾಹಿತಿ ಇದ್ದರೂ ಇರಲಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ತೀರ್ಪು ಬಂದ 2-3 ತಿಂಗಳ ನಂತರ ಅದರ ಬಗ್ಗೆ ಗೊತ್ತಾಯಿತು ಆದರೆ ನಿಖರವಾದ ದಿನಾಂಕ ಗೊತ್ತಿಲ್ಲ. ನನ್ನ ಮೂರು ಜನ ಮಕ್ಕಳು ಯಾವ ಯಾವ ದಿನಾಂಕಗಳಂದು ಮೃತಪಟ್ಟಿದ್ದರು? ಎಂದರೆ ದಿನಾಂಕಗಳು ಗೊತ್ತಿಲ್ಲ ಆದರೆ ಮರಣ ಪ್ರಮಾಣ ಪತ್ರಗಳನ್ನು ಹಾಜರು ಮಾಡಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ಇಬ್ಬರು ಮಕ್ಕಳು ಮೃತಪಟ್ಟಿದ್ದರಿಂದ ಅಪೀಲು ಸಲ್ಲಿಸಲು ವಿಳಂಬವಾಗಿದೆ ಎಂದು ಬರೆದಿದ್ದು, ನಾನು ಮೂರು ಜನ ಮಕ್ಕಳು ಮೃತಪಟ್ಟಿದ್ದರೆಂದು ಹೇಳುತ್ತಿದ್ದೇನೆ, ಇವೆರಡರಲ್ಲಿ ಯಾವುದು ನಿಜ? ಎಂದರೆ ನನ್ನ ಮೂರು ಜನ ಮಕ್ಕಳು ಮೃತಪಟ್ಟಿದ್ದರು ಎಂಬುದು ನಿಜವಿರುತ್ತದೆ. ಸದರಿ ದಾವೆಯಲ್ಲಿ ತೀರ್ಪು ಪ್ರಕಟವವಾಗುವ ತುಂಬಾ ಮುಂಚೆಯೇ ನನ್ನ ಇಬ್ಬರು ಮಕ್ಕಳು ಮೃತಪಟ್ಟಿದ್ದರು ಎಂದರೆ ಸರಿ. ತೀರ್ಪಿನ ದೃಢೀಕೃತ ಪ್ರತಿಯನ್ನು ಪಡೆಯಲು ನಾನು ಅರ್ಜಿ ಸಲ್ಲಿಸಿದ್ದೇನೋ ಇಲ್ಲವೋ ಎಂಬ ಬಗ್ಗೆ ನನಗೆ ನೆನಪಿಲ್ಲ. ನಾನು ತೀರ್ಪಿನ ಪ್ರತಿ ಪಡೆಯಲು ಯಾವ ದಿನಾಂಕದಂದು ಅರ್ಜಿ ಸಲ್ಲಿಸಿದ್ದೆನೆಂದು ನನಗೆ ನೆನಪಿಲ್ಲ. ನನಗೆ ಎಷ್ಟನೇ ತಾರೀಖಿನಿಂದ ಎಷ್ಟನೇ ತಾರೀಖಿನವರೆಗೆ ಹುಷಾರಿರಲಿಲ್ಲ ಮತ್ತು ಎಷ್ಟು ದಿನಗಳ ಕಾಲ ಹುಷಾರಿರಲಿಲ್ಲ? ಎಂದರೆ ನನಗೆ ಗೊತ್ತಿಲ್ಲ, ಆದರೆ ದಾವಣಗೆರೆಯ ಸಿಟಿ ಆಸ್ಪತ್ರೆಯಲ್ಲಿ ತೋರಿಸಿಕೊಂಡಿದ್ದೆ. ಅಲ್ಲಿ ಒಂದು ತಿಂಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದೆ.

ಆಸ್ಪತ್ರೆಗೆ ತೋರಿಸಿಕೊಂಡ ದಾಖಲೆಗಳನ್ನು ಹಾಜರು ಮಾಡಿಲ್ಲ. ನನ್ನ ಅರ್ಜಿಯಲ್ಲಿ ಆಸ್ಪತ್ರೆಯ ದಾಖಲೆಗಳು ಮನೆ ಬದಲಾಯಿಸುವಾಗ ಕಾಣೆಯಾಗಿವೆ ಎಂಬುದನ್ನು ನಾನು ಬರೆಯಿಸಿಲ್ಲ. ನಾನು 3 ಮನೆಗಳನ್ನು ಬದಲಾಯಿಸಿದ್ದೆ. ಅವುಗಳಲ್ಲಿ ಒಂದು ಮನೆಗೆ ಮಾತ್ರ ಬಾಡಿಗೆ ಕರಾರು ಮಾಡಿಕೊಂಡಿದ್ದೆ, ಇನ್ನೆರಡಕ್ಕೆ ಮಾಡಿಕೊಂಡಿರಲಿಲ್ಲ. ಬಾಡಿಗೆ ಕರಾರನ್ನು ನಾನು ಹಾಜರು ಮಾಡಿಲ್ಲ. ಆ ಮನೆಗಳ ಡೋರ್ ನಂಬರ್ ಗಳನ್ನು ಹೇಳಲು ಆಗುವುದಿಲ್ಲ ಆದರೆ ಮಾಲೀಕರ ಹೆಸರು ಹೇಳಬಲ್ಲೆ. ಅರ್ಜಿಯಲ್ಲಿ ದಾಖಲೆಗಳು ಮನೆ ಬದಲಾವಣೆ ಮಾಡುವಾಗ ಕಳೆದು ಹೋಗಿವೆ ಎಂದು ಬರೆಯಿಸಿಲ್ಲ. ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದ ವಿವರಗಳು ದೊರಕುತ್ತವೆ ಎಂದರೆ ಸರಿ. ನನಗೆ ಚಿಕಿತ್ಸೆ ಕೊಟ್ಟ ವೈದ್ಯರನ್ನು ಸಾಕ್ಷಿಯಾಗಿ ವಿಚಾರಣೆ ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ನನಗೆ ಆರೋಗ್ಯ ಸರಿ ಇರಲಿಲ್ಲ, ಒಳರೋಗಿಯಾಗಿ ದಾಖಲಾಗಿದ್ದೆ ಎಂದು ಈ ಅರ್ಜಿ ಸಲ್ಲಿಸಲು ಸುಳ್ಳು ಕಾರಣ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತೀರ್ಪಿನ ಪ್ರತಿಯನ್ನು 2-3 ತಿಂಗಳ ನಂತರ ಪಡೆದುಕೊಂಡಿದ್ದೇನೆ. ಅಪೀಲು ಸಲ್ಲಿಸಲು ಸೂಕ್ತವಾದ ಕಾರಣಗಳು ಇಲ್ಲದೇ ಇದ್ದರೂ ಸುಳ್ಳು ಅಪೀಲು ಮತ್ತು ಸುಳ್ಳು ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡಲು ಸುಳ್ಳು ಅಪೀಲು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
**ಹೂವಿನ ಹಡಗಲಿ.**